

# ಕುಬೇರ ದಾನಶೂರ

ಜಗತ್ತಿನಾದ್ಯಂತ ಕೊರೊನಾ ವೈರಸ್ ಹರಡಿರುವ ಕೋವಿಡ್ 19 ರೋಗ ಲಕ್ಷಾಂತರ ಜನರನ್ನು ಬಲಿ ತೆಗೆದುಕೊಳ್ಳುತ್ತಿದೆ. ಶ್ರೀಮಂತ ಅಥವಾ ಬಡ ದೇಶ ಎನ್ನದೆ ಜಗತ್ತಿನಾದ್ಯಂತ ಈ ರೋಗ ಹರಡಿದೆ. 185 ದೇಶಗಳಲ್ಲಿ ಸುಮಾರು 2.6 ಕೋಟಿ ಜನರಿಗೆ ಈ ಸೋಂಕು ತಗುಲಿದೆ. ಸುಮಾರು 1.81 ಲಕ್ಷ ಜನರು ಈಗಾಗಲೇ ಸಾವನ್ನಪ್ಪಿದ್ದಾರೆ. ಜಗತ್ತಿನ ದೊಡ್ಡಣ್ಣ ಎಂದು ಬೀಗುತ್ತಿದ್ದ ವೈದ್ಯಕೀಯ ಸೇವೆಗಳಲ್ಲಿ ಜಗತ್ತಿನಲ್ಲೇ ಅಗ್ರಗಣ್ಯ ಎನ್ನಲಾಗುತ್ತಿದ್ದ ಅಮೆರಿಕ ಸೋಂಕು ಪೀಡಿತರ ಮತ್ತು ಸಾವಿಗೊಳಗಾದವರ ಸಂಖ್ಯೆಯಲ್ಲಿ ಮುಂಚೂಣಿಯಲ್ಲಿದೆ. ಅಲ್ಲಿ 8.34 ಲಕ್ಷ ಜನರಿಗೆ ಸೋಂಕು ತಗುಲಿದ್ದು 46 ಸಾವಿರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ. ಕೋವಿಡ್ 19 ಅನ್ನು ಮಣಿಸಬಲ್ಲ ವ್ಯಾಕ್ಸೀನ್ ಕಂಡುಹಿಡಿಯಲು ಅಮೆರಿಕ ಸಹಿತ ಜಗತ್ತಿನ ಎಲ್ಲ ಶಕ್ತಿರಾಷ್ಟ್ರಗಳೂ ಭಗೀರಥ ಯತ್ನ ನಡೆಸಿವೆ. ಈ ಯತ್ನದ ಮುಂಚೂಣಿಯಲ್ಲಿ ನಿಂತಿರುವಾತ ಬಿಲ್ ಗೇಟ್ಸ್. ಜಗತ್ತಿನ ಎರಡನೇ ಅತಿದೊಡ್ಡ ಶ್ರೀಮಂತ, ಅಮೆರಿಕನ್ ಪ್ರಜೆ ಬಿಲ್ ಗೇಟ್ಸ್ ತನ್ನ ಗೇಟ್ಸ್ ಅಂಡ್ ಮೆಲಿಂಡಾ ಫೌಂಡೇಷನ್ ಮೂಲಕ ಕೋವಿಡ್ 19ಕ್ಕೆ ಮದ್ದು ಕಂಡುಹಿಡಿಯಲು ವೈದ್ಯಲೋಕಕ್ಕೆ ಎಲ್ಲ ರೀತಿಯ ಬೆಂಬಲವನ್ನೂ ನೀಡುತ್ತಿದ್ದಾರೆ. ಕೋವಿಡ್ 19 ಜಾಗತಿಕ ಚಿಕಿತ್ಸೆ ಮತ್ತು ವ್ಯಾಕ್ಸೀನ್ ಸಂಶೋಧನೆಗೆಂದೇ ಗೇಟ್ಸ್ ಫೌಂಡೇಷನ್ 100 ದಶಲಕ್ಷ ಡಾಲರ್ ನೆರವು ಘೋಷಿಸಿದೆ.

ವಿಲಿಯಂ ಹೆನ್ರಿ ಗೇಟ್ಸ್ ಎಂದರೆ ಹೆಸರು ಗೊತ್ತಾಗದೆ ಯಾರೂ ಗೇಟು ತೆಗೆಯಲಿಕ್ಕಿಲ್ಲ. ಆದರೆ ಬಿಲ್ ಗೇಟ್ಸ್ ಎಂದರೆ ವಿಶ್ವದಾದ್ಯಂತ ಜನರು ತೆರೆದ ಬಾಯಿ ಮುಚ್ಚುವುದಿಲ್ಲ. ಅಂತಹ ಅಚ್ಚರಿಯ ವ್ಯಕ್ತಿತ್ವ ಈತನದ್ದು. ಮೈಕ್ರೊಸಾಫ್ಟ್ ಎನ್ನುವ ಜಗದ್ವಿಖ್ಯಾತ ಸಾಫ್ಟ್‌ವೇರ್ ಕಂಪನಿಯನ್ನು ಕಟ್ಟಿ ಬೆಳೆಸಿದ ಸಹಸಂಸ್ಥಾಪಕ. ನೇರ ಮಾತಿನ, ಮುತ್ಸದ್ದಿ ಉದ್ಯಮಿ. 65ರ ಹರೆಯದ ಬಿಲ್ ಗೇಟ್ಸ್, ಈಗ ಪೂರ್ತಿಯಾಗಿ ಕಂಪನಿಯಿಂದ ಹೊರಗೆ ನಿಂತು ಮಾರ್ಗದರ್ಶನ ಮಾಡುತ್ತಿದ್ದಾರೆ. ಹಾಗೆ ನೋಡಿದರೆ ಅವರು ಕಂಪನಿಯ ದಿನನಿತ್ಯದ ವ್ಯವಹಾರಗಳನ್ನು ನೋಡುವುದು ಬಿಟ್ಟು ಹತ್ತು ವರ್ಷಗಳೇ ಕಳೆದಿವೆ. ಕಳೆದ ತಿಂಗಳು ಕಂಪನಿಯ ಆಡಳಿತ ಮಂಡಳಿಯಿಂದಲೂ ಹೊರಗೆ ಬಂದಿದ್ದಾರೆ.

ಇವತ್ತು ಕೊರೊನಾ ವೈರಸ್ ಸಿಕ್ಕು ಇಡೀ ಜಗತ್ತೇ ಬಳಲುತ್ತಿದೆ. ಎರಡು ವರ್ಷಗಳ ಹಿಂದೆ ಬಿಲ್ ಗೇಟ್ಸ್ ಒಂದು ಮಾತು ಹೇಳಿದ್ದರು. 'ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ಜಗತ್ತು ಇನ್ನೂ ಸನ್ನದ್ಧವಾಗಿಲ್ಲ. ಈ ನಿಟ್ಟಿನಲ್ಲಿ ಔಷಧಿ ತಯಾರಿಗೆ ಇನ್ನಷ್ಟು ಸಂಶೋಧನೆ ಆಗಬೇಕು' ಎನ್ನುವುದೇ ಆ ಮಾತು. ಐದು ವರ್ಷಗಳ ಹಿಂದೆಯೂ ಜಿ 9 ದೇಶಗಳ ಸಭೆಯಲ್ಲಿ ಗೇಟ್ಸ್ 'ಇಡೀ ಜಗತ್ತಿಗೆ ಒಮ್ಮೆಲೆ ಸಾಂಕ್ರಾಮಿಕ ರೋಗ ಎರಗುವ ಅಪಾಯ ತಪ್ಪಿಲ್ಲ. ಈ ಕುರಿತು ವೈದ್ಯಲೋಕ ಮುನ್ನೆಚ್ಚರಿಕೆ ವಹಿಸಬೇಕು' ಎಂದು ಗೇಟ್ಸ್ ಎಚ್ಚರಿಕೆ ನೀಡಿದ್ದರು. ಅವರು ನುಡಿದಿದ್ದ ಎಚ್ಚರಿಕೆ ಈಗ ವಾಸ್ತವವಾಗಿದೆ. ಕೋವಿಡ್ 19 ಅನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಅವರ ಗೇಟ್ಸ್ ಫೌಂಡೇಷನ್ ಬಹುದೊಡ್ಡ ಕೆಲಸ ಮಾಡುತ್ತಿದೆ. 'ವಿಶ್ವದಲ್ಲಿ ಏಳು ದೊಡ್ಡ ಸಂಶೋಧನಾ ಸಂಸ್ಥೆಗಳನ್ನು ಕಟ್ಟಲು ನಾನು ನೆರವು ನೀಡುತ್ತೇನೆ. ಇವುಗಳಲ್ಲಿ ವ್ಯಾಕ್ಸೀನ್ ಕಂಡುಹಿಡಿಯಲು ಎರಡೇ ಕಂಪನಿಗಳು ಯಶಸ್ವಿಯಾದರೂ ಪರವಾಗಿಲ್ಲ. ಉಳಿದ ಐದು ಕಂಪನಿಗಳಿಗೆ ಸುರಿದ ದುಡ್ಡು ವ್ಯರ್ಥವಾದರೂ ಪರವಾಗಿಲ್ಲ. ಶೀಘ್ರ ವ್ಯಾಕ್ಸೀನ್ ಕಂಡುಹಿಡಿಯಿರಿ. ಕೋವಿಡ್ 19ರಿಂದಾಗಿ ಇಡೀ ಜಗತ್ತೇ ಸಹಸ್ರ ಬಿಲಿಯನ್ ಡಾಲರ್‌ಗಳನ್ನು ಕಳೆದುಕೊಳ್ಳುತ್ತಿದೆ. ನಾನು ಒಂದಿಷ್ಟು ಶತಕೋಟಿ ಡಾಲರ್‌ಗಳನ್ನು ಕಳೆದುಕೊಂಡರೆ ಅದು ದೊಡ್ಡ ಸಂಗತಿಯಲ್ಲ, ಎನ್ನುವ ಮೂಲಕ ಸಂಶೋಧನಾ ಕಂಪನಿಗಳಿಗೆ ಸ್ಥೈರ್ಯ ತುಂಬುವ ಮಾತುಗಳನ್ನೂ ಅವರು ಆಡಿದ್ದಾರೆ.

ಗೇಟ್ಸ್ ಹೇಳುತ್ತಿರುವ ಮಾತುಗಳಲ್ಲಿ ಅರ್ಥವಿದೆ. ಕೋವಿಡ್ 19ರ ಹಿಡಿತಕ್ಕೆ ಸಿಕ್ಕು ಜಗತ್ತು ಕಂಗಾಲಾಗಿರುವಾಗಲೇ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ವಿಶ್ವ ಆರೋಗ್ಯ ಸಂಸ್ಥೆಗೆ ಅಮೆರಿಕ ನೀಡುತ್ತಿರುವ ನೆರವನ್ನು ನಿಲ್ಲಿಸುವುದಾಗಿ ಘೋಷಿಸಿದ್ದಾರೆ. ಇನ್ನೊಂದೆಡೆ ಜಿ 7 ದೇಶಗಳ ವಿದೇಶ ಸಚಿವರ ಸಭೆಯಲ್ಲಿ 'ಈ ಸೋಂಕನ್ನು ವುಹಾನ್ ವೈರಸ್ ಎಂದು ಕರೆಯಬೇಕು' ಎನ್ನುವ ಅಮೆರಿಕದ ಸಚಿವರ ಒತ್ತಾಯವನ್ನು ಉಳಿದವರು ಒಪ್ಪಿಲ್ಲ. ಅಧ್ಯಕ್ಷ ಟ್ರಂಪ್ ನಿರ್ಧಾರವನ್ನು ಬಿಲ್ ಗೇಟ್ಸ್ ಕಟುವಾಗಿ ಟೀಕಿಸಿದ್ದಾರೆ. 'ಇಡೀ ಜಗತ್ತೇ ಒಗ್ಗಟ್ಟಾಗಿ ನಿಂತು ಕಾರ್ಯನಿರ್ವಹಿಸಬೇಕಾದ ಸಮಯವಿದು. ಎಲ್ಲ ದೇಶಗಳೂ ಸೇರಿ ತಾತ್ಕಾಲಿಕ ಮಾದರಿಯ ಜಾಗತಿಕ ಸರ್ಕಾರವೊಂದನ್ನು ಸ್ಥಾಪಿಸಲು ಇದು ಸಕಾಲ' ಎನ್ನುವ ಗೇಟ್ಸ್ ಸಲಹೆ ಚಿಂತನೆಗೆ ಅರ್ಹವಾದದ್ದು. ಪರಿಸ್ಥಿತಿಯ ಗಂಭೀರತೆಯನ್ನೂ ಎತ್ತಿ ತೋರಿಸಿದ್ದಾರೆ ಗೇಟ್ಸ್.

ಬಿಲ್ ಗೇಟ್ಸ್ ಮಾತುಗಳನ್ನು ಇಡೀ ಜಗತ್ತೇ ಗಮನವಿಟ್ಟು ಕೇಳಿಸಿಕೊಂಡು ಕ್ರಿಯೆಗೆ ಇಳಿಯಬೇಕಾದ ಅಗತ್ಯವಿದೆ. ಕೋವಿಡ್ 19ರ ದಾಳಿಯಿಂದ ಜಗತ್ತಿನ ಎಲ್ಲ ಶತಕೋಟ್ಯಾಧಿಪತಿಗಳೂ ತಮ್ಮ ವಹಿವಾಟಿನಲ್ಲಿ ಕೋಟ್ಯಂತರ ಡಾಲರ್‌ಗಳ ನಷ್ಟ ಅನುಭವಿಸಿದ್ದಾರೆ. ಚೀನಾದ ನಂಬರ್ ಒನ್ ಶ್ರೀಮಂತ ಜಾಕ್ ಮಾ 8 ಶತಕೋಟಿ ಡಾಲರ್ ನಷ್ಟ ಅನುಭವಿಸಿದ್ದರೆ, ಬಿಲ್ ಗೇಟ್ಸ್ 5.3 ಶತಕೋಟಿ ಡಾಲರ್ ನಷ್ಟ ಅನುಭವಿಸಿದ್ದಾರೆ. ಶೇಕಡಾವಾರು ನಷ್ಟ ಗಮನಿಸಿದರೆ ಗೇಟ್ಸ್ ಅನುಭವಿಸಿದ್ದು ಶೇ 5.3 ನಷ್ಟ ಅಷ್ಟೇ. ವಿಶ್ವದ ಅತಿದೊಡ್ಡ ಚಾರಿಟಿ ಸಂಸ್ಥೆಯನ್ನು ಕಟ್ಟಿರುವ ಬಿಲ್ ಗೇಟ್ಸ್ ಪ್ರಕಾರ, ಕೋವಿಡ್ 19ರ ಅನಾಹುತ ಇನ್ನೂ ಆರಂಭಿಕ ಹಂತದಲ್ಲಿದೆ. ಇದನ್ನು ಸಮರ್ಥವಾಗಿ ಎದುರಿಸಲು ಇನ್ನೂ 70 ದಿನಗಳ ಲಾಕ್‌ಡೌನ್ ಅಗತ್ಯವಿದೆ! ಗೇಟ್ಸ್ ಇತರ ಕೋಟ್ಯಾಧಿಪತಿಗಳಂತೆ ಬರೀ ಮಾತಿನ ಶೂರ ಅಲ್ಲ. ತನ್ನ ಕಂಪನಿಯ ಷೇರು ಮೌಲ್ಯದ ಪೈಕಿ, 35.8 ಶತಕೋಟಿ ಡಾಲರ್ ಮೌಲ್ಯದ ಷೇರುಗಳನ್ನು ಗೇಟ್ಸ್ ಫೌಂಡೇಷನ್‌ನ ಚಾರಿಟಿ ಕೆಲಸಗಳಿಗೆ ಮೀಸಲಿಟ್ಟಿದ್ದಾರೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65